(07)

# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಡಾ|| ಧನಂಜಯ ಸರ್ಜಿ ರವರು ನಿಯಮ-330ರಡಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆ ಸಂಖ್ಯೆ:07:** ಮಕ್ಕಳ ವೈದ್ಯರ ಅಕಾಡೆಮಿ ಮಾರ್ಗಸೂಚಿಯಂತೆ ನವಜಾತ ಶಿಶುಗಳಿಗೆ ಹುಟ್ಟಿನಿಂದ ಒಂದು ವರ್ಷದವರೆಗೂ ವಿಟಮಿನ್ ಡಿ ಲಸಿಕೆಯನ್ನು ಸರ್ಕಾರಿ ಆಸ್ಪತ್ರೆಗಳಲ್ಲಿ ಖಡ್ಡಾಯವಾಗಿ ಉಚಿತವಾಗಿ ನೀಡುವ ಕುರಿತು ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳು, ತಾಲ್ಲೂಕು ಆಸ್ಪತ್ರೆ ಮತ್ತು ಜಿಲ್ಲಾಸ್ಪತ್ರೆಗಳಲ್ಲಿ ವೈದ್ಯರ ಕೊರತೆ, ತಾಂತ್ರಿಕ ಹುದ್ದೆಗಳು ಖಾಲಿ ಇರುವುದು, ಔಷಧಿ ಕೊರತೆ, 108 ಅಂಬ್ಯುಲೆನ್ಸ್ ಗಳಲ್ಲಿನ ಅವ್ಯವಸ್ಥೆಯೂ ಸೇರಿದಂತೆ ಆರೋಗ್ಯ ಇಲಾಖೆಯಲ್ಲಿನ ಸಮಸ್ಯೆಗಳು ಹಾಗೂ ಲೋಪದೋಷಗಳು ಮತ್ತು ಅವುಗಳ ಪರಿಹಾರದ ಮಾರ್ಗೋಪಾಯಗಳ ಕುರಿತು.

**ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಉತ್ತರ:-**

ನವಜಾತ ಶಿಶುಗಳಿಗೆ ಹುಟ್ಟಿನಿಂದ ಒಂದು ವರ್ಷದವರೆಗೂ ವಿಟಮಿನ್ ಡಿ ಲಸಿಕೆಯನ್ನು ಸರ್ಕಾರಿ ಆಸ್ಪತ್ರೆಗಳಲ್ಲಿ ಖಡ್ಡಾಯವಾಗಿ ಉಚಿತವಾಗಿ ನೀಡುವ ಕುರಿತು: ರಾಜ್ಯದ ಎಲ್ಲಾ ಆರೋಗ್ಯ ಸಂಸ್ಥೆಗಳಲ್ಲಿ ಪ್ರಸ್ತುತ ಪೂರೈಕೆಯಾಗದ ವಿಟಮಿನ್ ಡಿ ದ್ರಾವಣವನ್ನು ಎ.ಬಿ.ಆರ್.ಕೆ., ಆರೋಗ್ಯ ರಕ್ಷಾ ಸಮಿತಿ ಹಾಗೂ ಇತರೆ ಲಭ್ಯವಿರುವ ಅನುದಾನದಿಂದ ಸ್ಥಳೀಯವಾಗಿ ಔಷಧಿಯನ್ನು ಖರೀದಿಸಿ ನವಜಾತಶಿಶುಗಳಿಗೆ ನೀಡಲು ಕ್ರಮವಹಿಸಲಾಗಿದೆ.

ಮುಂದುವರೆದು, ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ (KKRDB) ವ್ಯಾಪ್ತಿಯ ಜಿಲ್ಲೆಗಳಲ್ಲಿರುವ (ಬೀದರ್, ಕಲಬುರಗಿ, ರಾಯಚೂರು, ಯಾದಗಿರಿ, ಕೊಪ್ಪಳ, ಬಳ್ಳಾರಿ&ವಿಜಯನಗರ) 0–1 ವರ್ಷದೊಳಗಿನ ಮಕ್ಕಳಿಗೆ KKRDB ಅನುದಾನದಡಿ ವಿಟಮಿನ್ 'ಡಿ' ದ್ರಾವಣವನ್ನು ನೀಡುವ ಸಲುವಾಗಿ ಜೂನ್ 2026ರಲ್ಲಿ ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ (KSMSCL) ಗೆ ಇಂಡೆಂಟ್ ನೀಡಲಾಗಿದೆ.

**ಪ್ರಾಥಮಿಕ ಆರೋಗ್ಯ ಕೇಂದ್ರಗಳು, ತಾಲ್ಲೂಕು ಆಸ್ಪತ್ರೆ ಮತ್ತು ಜಿಲ್ಲಾಸ್ಪತ್ರೆಗಳಲ್ಲಿ ವೈದ್ಯರ ಕೊರತೆ, ತಾಂತ್ರಿಕ ಹುದ್ದೆಗಳು ಖಾಲಿ ಇರುವುದು:**

1. ಇಲಾಖೆಯಲ್ಲಿ ಖಾಲಿಯಿರುವ 120 ತಜ್ಞ ವೈದ್ಯರು ಮತ್ತು 100 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳನ್ನು ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಿಕೊಳ್ಳಲು ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ : ಆಇ 625 ವೆಚ್ಚ-5/2024, ದಿನಾಂಕ : 06/06/2024ರಲ್ಲಿ ಸಹಮತಿ ನೀಡಿದ್ದು, ಅದರಂತೆ ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿದೆ.

2. The Karnataka compulsory service by candidates completed Medical courses Act, 2012 ಹಾಗೂ ಕಾಲಕಾಲಕ್ಕೆ ಮಾಡಲಾದ ತಿದ್ದುಪಡಿ ಕಾಯ್ದೆ ಹಾಗೂ ಇದರಡಿ ರಚಿಸಲಾದ ನಿಯಮದಡಿ ವೈದ್ಯಕೀಯ ಕೋರ್ಸ್, ಸ್ನಾತಕೋತ್ತರ ವೈದ್ಯಕೀಯ ಕೋರ್ಸ್‌ನ್ನು ಯಾಶಸ್ವಿಯಾಗಿ ಪೂರ್ಣಗೊಳಿಸಿದ ಅಭ್ಯರ್ಥಿಗಳಿಗೆ, ಖಾಲಿ ಹುದ್ದೆಗಳ ಲಭ್ಯತೆ ಆಧಾರದ ಮೇಲೆ ಒಂದು ವರ್ಷದ ಕಡ್ಡಾಯ ಸೇವೆಗೆ ನೇಮಿಸಲಾಗುತ್ತಿದೆ.

3. ಸರ್ಕಾರದ ಪೂರ್ವಾನುಮತಿಯೊಂದಿಗೆ ಸೇವಾನಿರತವಾಗಿ ತಜ್ಞತೆಯ Post graduate Degree/Diploma ಪದವಿ ಪೂರ್ಣಗೊಳಿಸಿ ಹಿಂದಿರುಗುವ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳಿಗೆ, ಅವರು ಹೊಂದುವ ತಜ್ಞತೆಯ ಆಧಾರದ ಮೇಲೆ ಇಲಾಖೆಯಲ್ಲಿನ ಲಭ್ಯತೆಯ ತಜ್ಞತಾ ಹುದ್ದೆಗೆ ನೇಮಿಸಲಾಗುತ್ತಿದೆ.

....2

4. ಸರ್ಕಾರದ ಆದೇಶ ಸಂಖ್ಯೆ : ಆಕುಕ 619 ಹೆಚ್‌ಎಸ್‌ಹೆಚ್ 2022, ದಿನಾಂಕ : 17/01/2024 ಹಾಗೂ 11/03/2024ರಲ್ಲಿ ಇಲಾಖೆಯಲ್ಲಿ ಖಾಲಿ ಇರುವ 337 ತಜ್ಞ ವೈದ್ಯರು ಮತ್ತು 250 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಕೆಲವೊಂದು ಷರತ್ತುಗಳಿಗೆ ಒಳಪಡಿಸಿ ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲು ಅವಕಾಶ ನೀಡಲಾಗಿದೆ.

5. ಸುತ್ತೋಲೆ ಸಂಖ್ಯೆ : ಆಕುಕ 21 ಹೆಚ್‌ಎಸ್‌ಹೆಚ್ 2025, ದಿನಾಂಕ : 08/01/2025 ಮತ್ತು ಸೇರ್ಪಡೆ ಸಂಖ್ಯೆ : HFW/1/PRS/2025, ದಿನಾಂಕ : 25/01/2025 ಮತ್ತು ಪತ್ರ ದಿನಾಂಕ : 29/01/2025ರಲ್ಲಿ ಒಟ್ಟಾರೆಯಾಗಿ 250 ಮಿತಿಯಲ್ಲಿ ಅಗತ್ಯಕ್ಕನುಗುಣವಾಗಿ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ/ತುರ್ತು ಚಿಕಿತ್ಸಾ ವೈದ್ಯಾಧಿಕಾರಿ/ ಹಿರಿಯ ವೈದ್ಯಾಧಿಕಾರಿ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಅನುಮತಿ ನೀಡಲಾಗಿದೆ.

ಇಲಾಖೆಯಲ್ಲಿ ಕಾಲಕಾಲಕ್ಕೆ ನಿಧನ, ನಿವೃತ್ತಿ, ರಾಜೀನಾಮೆ, ಸ್ವ-ಇಚ್ಛಾ ನಿವೃತ್ತಿ ಮತ್ತಿತರ ಕಾರಣಗಳಿಗಾಗಿ ಖಾಲಿಯಾಗುವ ತಜ್ಞ ವೈದ್ಯರು, ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹಾಗೂ ದಂತ ಆರೋಗ್ಯಾಧಿಕಾರಿಗಳ ಹುದ್ದೆಗಳನ್ನು ನೇರ ನೇಮಕಾತಿ, ಮುಂಬಡ್ತಿ, ಗುತ್ತಿಗೆ ಆಧಾರದಡಿ, ಕಡ್ಡಾಯ ಸೇವೆಯಡಿ ಭರ್ತಿ ಮಾಡುವ ಮೂಲಕ ಹುದ್ದೆಗಳ ಕೊರತೆಯಾಗದಂತೆ ಕ್ರಮವಹಿಸಲಾಗುತ್ತಿದೆ.

ಅರೆ ವೈದ್ಯಕೀಯ ಮತ್ತು ಇತರೆ ಸಿಬ್ಬಂದಿಗಳ ನೇಮಕಾತಿ/ ಭರ್ತಿಗೆ ಸಂಬಂಧಿಸಿದ ಮಾಹಿತಿಯು ಈ ಕೆಳಕಂಡಂತಿರುತ್ತದೆ.

1. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ 1205 ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ ಹಾಗೂ 300 ಆರೋಗ್ಯ ನಿರೀಕ್ಷಣಾಧಿಕಾರಿಗಳ ಹುದ್ದೆಗಳನ್ನು ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಲು ಕರಡು ವಿಶೇಷ ನೇಮಕಾತಿ ನಿಯಮಗಳನ್ನು ಪ್ರಕಟಿಸುವ ಪ್ರಕ್ರಿಯೆಯು ಚಾಲನೆಯಲ್ಲಿರುತ್ತದೆ.

2. ಸರ್ಕಾರದ ಆದೇಶ ಸಂಖ್ಯೆ: ಆಕುಕ 14 ಹೆಚ್‌ಎಸ್‌ಎಂ 2025, ದಿ:21.05.2025ರಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ಎದುರಾಗಿ 400 ಕಿರಿಯ ಪ್ರಯೋಗಶಾಲಾ ತಂತ್ರಜ್ಞರು ಮತ್ತು 400 ಫಾರ್ಮಾಸಿಸ್ಟ್ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಒಂದು ವರ್ಷದ ಅವಧಿಗೆ ಭರ್ತಿ ಮಾಡಿಕೊಳ್ಳಲು ಅನುಮತಿ ನೀಡಲಾಗಿರುತ್ತದೆ.

3. ಸರ್ಕಾರದ ಆದೇಶ ಸಂಖ್ಯೆ: ಆಕುಕ 178 ಹೆಚ್‌ಎಸ್‌ಎಂ 2025, ದಿನಾಂಕ. 30/06/2025ರಲ್ಲಿ 2025-26 ನೇ ಸಾಲಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿನ ರಾಜ್ಯವಲಯದ ಆಸ್ಪತ್ರೆಗಳಲ್ಲಿ ಖಾಲಿಯಿರುವ ಗ್ರೂಪ್‌ಡಿ ಹುದ್ದೆಗಳ ಪೈಕಿ ಶೇಕಡ 80 ರಷ್ಟು (80%) ಹುದ್ದೆಗಳನ್ನು ಮಾತ್ರ ಹೊರಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಿಕೊಳ್ಳಲು ಕೆಲವೊಂದು ಷರತ್ತುಗಳಿಗೊಳಪಡಿಸಿ ಅನುಮತಿ ನೀಡಲಾಗಿರುತ್ತದೆ.

4. ಸರ್ಕಾರದ ಆದೇಶ ಸಂಖ್ಯೆ: ಆಕುಕ 62 ಎಂಎಸ್‌ಎನ್ 2025, ದಿ: 22.09.2025ರಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಮಂಜೂರಾಗಿ ಖಾಲಿ ಇರುವ 600 ಶುಶ್ರೂಷಾಧಿಕಾರಿಗಳ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಿಕೊಳ್ಳಲು ಅನುಮತಿ ನೀಡಲಾಗಿರುತ್ತದೆ.

5. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕಲ್ಯಾಣ ಕರ್ನಾಟಕ ವೃಂದದಲ್ಲಿ ಖಾಲಿಯಿರುವ ವಿವಿಧ ವೃಂದದ 877 ಅರೆ ವೈದ್ಯಕೀಯ ಹುದ್ದೆಗಳನ್ನು ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಲು ಕರಡು ವಿಶೇಷ ನೇಮಕಾತಿ ನಿಯಮಗಳನ್ನು ರೂಪಿಸುವಿಕೆಯ ಪ್ರಕ್ರಿಯೆಯು ಚಾಲನೆಯಲ್ಲಿರುತ್ತದೆ.

ವೈದ್ಯರು, ಅರೆವೈದ್ಯಕೀಯ ಸಿಬ್ಬಂದಿಗಳ ಕೊರತೆಯನ್ನು ನೀಗಿಸಲು **NHM** ರಾಷ್ಟ್ರೀಯಾ ಆರೋಗ್ಯ ಅಭಿಯಾನದ ವತಿಯಿಂದ ಈ ಕೆಳಕಂಡ ಸಿಬ್ಬಂದಿಗಳನ್ನು ಗುತ್ತಿಗೆ/ ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲಾಗಿರುತ್ತದೆ.

| Sl.No. | Designation | Approvals | Working | Vacant | Percentage of in-place HR |
|---|---|---|---|---|---|
| 1 | Medical Officer-MBBS | 1133 | 954 | 179 | 84% |
| 2 | Specialists | 582 | 552 | 30 | 95% |
| 3 | Medical Officer-AYUSH | 1539 | 1421 | 118 | 92% |
| 4 | MPW(Male+Female) | 2467 | 2429 | 38 | 98% |
| 5 | Staff Nurses | 8454 | 8299 | 155 | 98% |
| 6 | Laboratory Technician | 1530 | 1473 | 57 | 96% |
| 7 | Pharmacists | 298 | 280 | 18 | 94% |
| 8 | CHO | 6203 | 5330 | 873 | 86% |
| 9 | Others | 8175 | 6947 | 1228 | 85% |
| **TOTAL** | | **30381** | **27685** | **2696** | **91%** |

**ಔಷಧಿ ಕೊರತೆ:-**

ಆರೋಗ್ಯ ಸಂಸ್ಥೆಗಳಲ್ಲಿ ಪ್ರಸ್ತುತ ಪೂರೈಕೆಯಾಗದ ಜೀವ ರಕ್ಷಕ ಮತ್ತು ಅಗತ್ಯ ಔಷಧಗಳನ್ನು ಎ.ಬಿ.ಆರ್.ಕೆ. ಆರೋಗ್ಯ ರಕ್ಷಾ ಸಮಿತಿ ಹಾಗೂ ಇತರೆ ಲಭ್ಯವಿರುವ ಅನುದಾನದಿಂದ ಸ್ಥಳಿಯವಾಗಿ ಔಷಧಿಗಳನ್ನು ಖರೀದಿಸಿ ರೋಗಿಗಳಿಗೆ ನೀಡಲು ಕ್ರಮವಹಿಸಲು ಆದೇಶಿಸಲಾಗಿದೆ.

ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಇದರಿಂದ ಆಸ್ಪತ್ರೆಗಳಿಗೆ ರೂ. 30 ಕೋಟಿ ಮೊತ್ತವನ್ನು ಸರ್ಕಾರದ ಆದೇಶ ಸಂಖ್ಯೆ ಆಕುಕ 33 ಎಫ್.ಪಿ.ಎಸ್ 2026, ದಿನಾಂಕ: 18.02.2026 ರಲ್ಲಿ ಆರೋಗ್ಯ ಸಂಸ್ಥೆಗಳಿಗೆ ಬಿಡುಗಡೆ ಮಾಡಲಾಗಿದೆ.

ವಾರ್ಷಿಕ ಇಂಡೆಂಟ್ ಔಷಧಿಗಳ ಖರೀದಿ ಪ್ರಸ್ತಾವನ್ನು ಅಂದಾಜು ಮೌಲ್ಯರೂ.880.68 ಕೋಟಿ ಯಂತೆ ಸರ್ಕಾರದ ಆದೇಶ ಸಂಖ್ಯೆ ಆಕುಕ 129 ಎಫ್ ಪಿ ಆರ್ 2025 ಬೆಂಗಳೂರು ದಿನಾಂಕ:1.08.2025 ರಲ್ಲಿ ಬಹುತೇಕ ಅಗತ್ಯ ಔಷಧಿಗಳನ್ನು KSMSCL ವತಿಯಿಂದ ತ್ವರಿತವಾಗಿ ಖರೀದಿಸಿ ಹಾಗೂ ವಿತರಿಸಲು ಕ್ರಮ ಕೈಗೊಳಲಾಗಿದೆ.

....4

ರಾಜ್ಯದ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ AbArK, JSSK ಹಾಗೂ ARS ಅನುದಾನಗಳನ್ನು ಬಳಸಿಕೊಂಡು ಅಗತ್ಯ ಜೀವರಕ್ಷಕ ಔಷಧಿಗಳನ್ನು ಖರೀದಿಸಿ ರೋಗಿಗಳಿಗೆ ನೀಡಲು ಕ್ರಮವಹಿಸಲು ಸೂಚಿಸಲಾಗಿದೆ.

**ಕೆ.ಎಸ್.ಎಂ.ಎಸ್.ಸಿ. ಎಲ್ ವತಿಯಿಂದ ಔಷದಿಗಳನ್ನು ಖರೀದಿಸಿ ಸರಬರಾಜು ಮಾಡುವ ಬಗ್ಗೆ.**

ಸರ್ಕಾರವು 2025-26ನೇ ಸಾಲಿಗೆ ಒಟ್ಟು 890 ಔಷಧಿಗಳ ಖರೀದಿಗೆ ಅನುಮೋದನೆ ನೀಡಿದೆ. ಅವುಗಳಲ್ಲಿ ರೂ. 868.62 ಕೋಟಿ ಮೌಲ್ಯದ 534 ಔಷಧಿಗಳನ್ನು ಕರ್ನಾಟಕ ಸ್ಟೇಟ್ ಮೆಡಿಕಲ್ ಸಪ್ಲೈಸ್ ಕಾರ್ಪೊರೇಷನ್ ಲಿಮಿಟೆಡ್ (KSMSCL) ಮೂಲಕ ಟೆಂಡರ್ ಪ್ರಕ್ರಿಯೆಯ ಮೂಲಕ ಖರೀದಿಸಲಾಗುತ್ತದೆ. ಉಳಿದ ರೂ. 12.06 ಕೋಟಿ ಮೌಲ್ಯದ 356 ಕಡಿಮೆ ಮೌಲ್ಯದ ಔಷಧಿಗಳನ್ನು ಸ್ಥಳೀಯ ಖರೀದಿ ವಿಧಾನಗಳ ಮೂಲಕ ಪಡೆಯಲಾಗುತ್ತದೆ. ಈ ಸಂಬಂಧ KSMSCL ಸಂಸ್ಥೆಯಿಂದ ಟೆಂಡರ್ ಪ್ರಕ್ರಿಯೆ ಪ್ರಾರಂಭಿಸಲಾಗಿದ್ದು, Priority-1 ಮತ್ತು Priority-2 ಪ್ಯಾಕೇಜುಗಳ ಅಡಿಯಲ್ಲಿ 496 ಔಷಧಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ.

ಪ್ರಸ್ತುತ ಸ್ಥಿತಿಯ ಪ್ರಕಾರ 496 ಔಷಧಿಗಳಿಗೆ ಟೆಂಡರ್ ಆಹ್ವಾನಿಸಲಾಗಿದ್ದು, ಅವುಗಳಲ್ಲಿ 211 ಔಷಧಿಗಳಿಗೆ Notification of Award ನೀಡಲಾಗಿದೆ ಹಾಗೂ 174 ಔಷಧಿಗಳಿಗೆ Purchase Order ನೀಡಲಾಗಿದೆ. ಸುಮಾರು 216 ಔಷಧಿಗಳು ಟೆಂಡರ್ ಪ್ರಕ್ರಿಯೆಯ ವಿವಿಧ ಹಂತಗಳಲ್ಲಿವೆ ಮತ್ತು Zero ಅಥವಾ Non-responsive ಬಿಡ್ ಬಂದಿರುವ ಸುಮಾರು 125 ಔಷಧಿಗಳಿಗೆ ಮರು ಟೆಂಡರ್ ಮಾಡಲು ಕ್ರಮ ಕೈಗೊಳ್ಳಲಾಗಿದೆ. ಈಗಾಗಲೇ 120 ಔಷಧಿಗಳು ರಾಜ್ಯದ ಉಗ್ರಾಣಗಳಿಗೆ ಸರಬರಾಜಾಗಿವೆ ಮತ್ತು ಉಗ್ರಾಣಗಳಿಗೆ ಬಂದ ಎಲ್ಲಾ ಔಷಧಿಗಳನ್ನು ಎಂಪ್ಯಾನಲ್ ಮಾಡಲಾದ ಪ್ರಯೋಗಾಲಯಗಳಲ್ಲಿ ಕಡ್ಡಾಯ ಗುಣಮಟ್ಟ ಪರೀಕ್ಷೆ ನಡೆಸಿದ ನಂತರವೇ ಆರೋಗ್ಯ ಸಂಸ್ಥೆಗಳಿಗೆ ವಿತರಿಸಲಾಗುತ್ತದೆ.

ಇದಲ್ಲದೆ, ಆರೋಗ್ಯ ಸಂಸ್ಥೆಗಳು ಅಗತ್ಯವಿರುವ ಔಷಧಿಗಳನ್ನು Government e-Marketplace (GeM) ಪೋರ್ಟಲ್ ಮೂಲಕವೂ ಖರೀದಿಸಲು ಅವಕಾಶ ಕಲ್ಪಿಸಲಾಗಿದೆ. ಇದರಿಂದ ತುರ್ತು ಅವಶ್ಯಕತೆಗಳಿಗೆ ಔಷಧಿಗಳನ್ನು ತ್ವರಿತವಾಗಿ ಪಡೆಯಲು ಸಹಾಯವಾಗುತ್ತದೆ.

ಎಲ್ಲಾ ಜಿಲ್ಲೆಗಳ ಜಿಲ್ಲಾ ಶಸ್ತ್ರಚಿಕಿತ್ಸಕರು (District Surgeons) ಮತ್ತು ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ (DHO) ಔಷಧಿಗಳ ಕೊರತೆ ಉಂಟಾದಲ್ಲಿ, ಜಿಲ್ಲೆಗಳು AB-ARK ನಿಧಿ ಹಾಗೂ SAST ವತಿಯಿಂದ ಜಿಲ್ಲೆಗಳಿಗೆ ಬಿಡುಗಡೆ ಮಾಡಿರುವ ನಿಧಿಗಳನ್ನು ಬಳಸಿಕೊಂಡು ರೋಗಿಗಳಿಗೆ ತೊಂದರೆಯಾಗದಂತೆ ಸ್ಥಳೀಯವಾಗಿ ಔಷಧಿಗಳನ್ನು ಖರೀದಿಸಿ ನೀಡಲು ಹಾಗೂ ರೋಗಿಗಳಿಗೆ ಯಾವುದೇ ತೊಂದರೆ ಉಂಟಾಗದಂತೆ ಕ್ರಮ ವಹಿಸಲಾಗುತ್ತಿದೆ.

e-Aushada ಸಾಫ್ಟ್‌ವೇರ್ ಮಾಹಿತಿ ಪ್ರಕಾರ, KSMSCL ಮೂಲಕ ಸರಬರಾಜು ಮಾಡಬೇಕಿರುವ ಒಟ್ಟು 534 ಔಷಧಿಗಳಲ್ಲಿ, 183 ಔಷಧಿಗಳು ಈಗಾಗಲೇ ಗೋದಾಮುಗಳಲ್ಲಿ ಲಭ್ಯವಿದ್ದು ಜಿಲ್ಲೆಗಳಿಗೆ ಪೂರೈಕೆ ಮಾಡಲಾಗುತ್ತಿದೆ. ಇದಲ್ಲದೆ. ಒಟ್ಟು 487 ಔಷಧಿಗಳು ಆರೋಗ್ಯ ಸಂಸ್ಥೆಗಳಲ್ಲಿ ಲಭ್ಯವಿರುವುದು ತಿಳಿದುಬರುತ್ತದೆ.

.....5

**108 ಅಂಬ್ಯುಲೆನ್ಸ್ ಗಳಲ್ಲಿನ ಅವ್ಯವಸ್ಥೆಯೂ ಸೇರಿದಂತೆ ಆರೋಗ್ಯ ಇಲಾಖೆಯಲ್ಲಿನ ಸಮಸ್ಯೆಗಳು ಹಾಗೂ ಲೋಪದೋಷಗಳು ಮತ್ತು ಅವುಗಳ ಪರಿಹಾರದ ಮಾರ್ಗೋಪಾಯಗಳ ಕುರಿತು:**

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಅಡಿಯಲ್ಲಿ, ಆರೋಗ್ಯ ಸಂಸ್ಥೆಗಳ ಮಟ್ಟದಲ್ಲಿ ರೋಗಿಗಳನ್ನು ಒಂದು ಆರೋಗ್ಯ ಸಂಸ್ಥೆಯಿಂದ ಮತ್ತೊಂದು ಆರೋಗ್ಯ ಸಂಸ್ಥೆಗೆ ಸ್ಥಳಾಂತರಿಸಲು (Inter-facility Transport) (ನಗು-ಮಗು ಕಾರ್ಯಕ್ರಮಗಳಡಿ 169 ಅಂಬ್ಯುಲೆನ್ಸ್ ಗಳು ಒಳಗೊಂಡಂತೆ) ಒಟ್ಟು 1,101 ರಾಜ್ಯ ವಲಯದ ಆಂಬ್ಯುಲೆನ್ಸ್‌ಗಳು ಕಾರ್ಯನಿರ್ವಹಿಸುತ್ತಿವೆ. ಇದಲ್ಲದೆ, 108 ಆರೋಗ್ಯ ಕವಚ ಯೋಜನೆಯಡಿ 715 ಆಂಬ್ಯುಲೆನ್ಸ್ ಗಳು ಕಾರ್ಯನಿರ್ವಹಿಸುತ್ತಿವೆ.

| ಆಂಬ್ಯುಲೆನ್ಸ್‌ಗಳು | ರಾಜ್ಯವಲಯದ | 108 ಆರೋಗ್ಯ ಕವಚ ಯೋಜನೆಯಡಿ |
|---|---|---|
| Advanced Life Support (ALS) | 112 | 289 |
| Basic Life Support (BLS) | 820 | 426 |
| NAGU MAGU | 169 | 0 |
| **Total ambulances** | **1101** | **715** |

ಈ ಹಿನ್ನೆಲೆಯಲ್ಲಿ ಪ್ರಸ್ತುತ 108 ಆರೋಗ್ಯ ಕವಚದಡಿ ಕಾರ್ಯನಿರ್ವಹಿಸುತ್ತಿರುವ 715 ಅಂಬ್ಯುಲೆನ್ಸ್‌ಗಳು ಮತ್ತು ರಾಜ್ಯ ವಲಯದ 1,101 ಆಂಬ್ಯುಲೆನ್ಸ್‌ಗಳೊಂದಿಗೆ, ಸರ್ಕಾರಿ ಸ್ವಾಮ್ಯದ ಕಮಾಂಡ್ ಮತ್ತು ಕಂಟ್ರೋಲ್ ಕೇಂದ್ರದ ಮೂಲಕ ಸಂಪೂರ್ಣ ಆಂಬ್ಯುಲೆನ್ಸ್ ವ್ಯವಸ್ಥೆಯ ಸಮರ್ಪಕ ಬಳಕೆಯ ಪ್ರಕ್ರಿಯ ಪ್ರಗತಿಯಲ್ಲಿದೆ ಹಾಗೂ ರಾಜ್ಯಾದ್ಯಂತ ತುರ್ತು ಆಂಬ್ಯುಲೆನ್ಸ್ ಸೇವೆಗಳನ್ನು ಅಗತ್ಯಕ್ಕೆ ತಕ್ಕಂತೆ ಒದಗಿಸಲಾಗುತ್ತಿದೆ.

ಆರೋಗ್ಯ ಇಲಾಖೆಯಲ್ಲಿನ ಸಮಸ್ಯೆಗಳು ಹಾಗೂ ಲೋಪದೋಷಗಳು ಮತ್ತು ಅವುಗಳ ಪರಿಹಾರದ ಮಾರ್ಗೋಪಾಯಗಳ ಕುರಿತು: ಆರೋಗ್ಯ ಇಲಾಖೆಯಲ್ಲಿ ಖಾಲಿಯಿರುವ ವೈದ್ಯರು ಮತ್ತು ತಾಂತ್ರಿಕ ಹುದ್ದೆಗಳನ್ನು ಭರ್ತಿ ಮಾಡಲು ಈಗಾಗಲೇ ಕ್ರಮವಹಿಸಲಾಗಿದೆ.

**ಔಷಧಿಗಳ ಸರಬರಾಜು :** ಆರೋಗ್ಯ ಸಂಸ್ಥೆಗಳಲ್ಲಿ ಪ್ರಸ್ತುತ ಪೂರೈಕೆಯಾಗದ ಜೀವ ರಕ್ಷಕ ಮತ್ತು ಅಗತ್ಯ ಔಷಧಗಳನ್ನು ಎ.ಬಿ.ಆರ್.ಕೆ, ಆರೋಗ್ಯ ರಕ್ಷಾ ಸಮಿತಿ ಹಾಗೂ ಇತರ ಲಭ್ಯವಿರುವ ಅನುದಾನದಿಂದ ಸ್ಥಳೀಯವಾಗಿ ಔಷಧಿಗಳನ್ನು ಖರೀದಿಸಿ ರೋಗಿಗಳಿಗೆ ನೀಡಲು ಕ್ರಮವಹಿಸಲಾಗಿದೆ.

**ಸಂಖ್ಯೆ:ಆಕುಕ 134 ಎಫ್‌ಪಿಎಸ್ 2026**

**(ಯು.ಟಿ.ಖಾದರ್ ಫರೀದ್)**
ಅಲ್ಪ ಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಹಾಗೂ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು